## <u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶೃಂಗೇರಿ</u>

**<u>ಸಿ.ಸಿ. ನಂಃ 101/2022</u>**

**ಫಿರ್ಯಾದುದಾರರು** ಃ ಎಸ್. ನಾಗೇಶ್ , ಬಿನ್. ಸಾಧು ಪೂಜಾರಿ,
ವಯಸು ಸುಮಾರು 49 ವರ್ಷ, ವ್ಯವಹಾರಗಾರರು,
ವಾಸಃ ಸಂಕ್ಲಾಪುರ, ಶೃಂಗೇರಿ,
ಶೃಂಗೇರಿ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

**ಃವಿರುದ್ಧಃ**

**ಆರೋಪಿ** ಃ ಶ್ರೀಮತಿ ಸುಜಾತ, ಕೋಂ. ರಾಘವೇಂದ್ರ,
ವಯಸು ಸುಮಾರು 35 ವರ್ಷ,
**ಸದರಿ ವಾಸಃ** ಮಹಮ್ಮದ್ ಮಜಾರ್ ,
ಗಂಧರ್ವ ಹೋಟಲ್ ಎದುರು,
ಭಾರತೀ ರಸ್ತೆ, ಶೃಂಗೇರಿ ಟೌನ್,
ಶೃಂಗೇರಿ ತಾಲ್ಲೂಕು.

*****

<u>ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿ ಹೇಳಿಕೆ</u>

ಪ್ರಶ್ನೆ.1 ಃ ಫಿರ್ಯಾದುದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ ಃ ಕೇಳಿದ್ದೇನೆ

ಪ್ರಶ್ನೆ.2 ಃ ಫ್ರಾಸಾ.1 ಎಸ್. ನಾಗೇಶ್, ಬಿನ್ ಸಾಧು ಪೂಜಾರಿ, ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ನೀವು ಸುಮಾರು ವರ್ಷಗಳಿಂದ ಪರಿಚಯ ಇದ್ದು ನಿಮ್ಮ ತುರ್ತು ಅವಶ್ಯಕತೆಯ ಉದ್ದೇಶಕ್ಕಾಗಿ ಆಗಸ್ಟ್-2021 ರಲ್ಲಿ ಮುಂಗಡ ಹಣ ದಿನಾಂಕಃ20.08.2021 ರಂದು ರೂ.6,00,000/- ಗಳನ್ನು ಸಾಲವಾಗಿ ಪಡೆದಿದ್ದು ಸದರಿ ಸಾಲದ ಹಣವನ್ನು ಮರುಪಾವತಿಗಾಗಿ ಆರೋಪಿಯಾದ ನೀವು ಅದೇ ದಿನ ನಮೂದಿಸಿ ರೂ.6,00,000/- ಗಳನ್ನು ನಮೂದಿಸಿರುವ **457673** ನೇ ಚೆಕ್ ಸಂಖ್ಯೆಯ, ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ(ಕಾರ್ಪೋರೇಷನ್ ಬ್ಯಾಂಕ್), ಶೃಂಗೇರಿ ಶಾಖೆಯ ಒಂದು ಚೆಕ್ಕನ್ನು ನೀಡಿ ನಗಧಿಕರಿಸಿಕೊಳ್ಳುವಂತೆ ನೀಡಿರುತ್ತೀರಿ ಎಂದು ಹೇಳಿದ್ದಾರೆ, ಇದಕ್ಕೆ ನೀವೇನ್ನು ಹೇಳುತ್ತೀರಿ?

ಉತ್ತರ ಃ [illegible]

ಪ್ರಶ್ನೆ.3 ಃ ಫ್ರಾಸಾ.1 ರವರು ಮುಂದುವರೆದು ಆರೋಪಿಯಾದ ನಿಮ್ಮ ಮಾತಿನ ಮೇಲೆ ವಿಶ್ವಾಸ ಹಾಗೂ ನಂಬಿಕೆ ಇಟ್ಟು ಸದರಿ ಸದರಿಯವರು ದಿನಾಂಕಃ14/12/2021 ರಂದು ಜಮಾವಣೆಗಾಗಿ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ, ಶೃಂಗೇರಿ ಶಾಖೆಗೆ ಹಾಜರುಪಡಿಸಿದಾಗ, ಬ್ಯಾಂಕಿನವರು

ನಿಮ್ಮ ಖಾತೆಯಲ್ಲಿ ***Insufficient funds*** ವೆಂಬ ಷರಾದೊಂದಿಗೆ ದಿನಾಂಕಃ14/12/2021 ರಂದು ಅಮಾನ್ಯವಾಗಿರುತ್ತದೆ ಎಂದು ಹೇಳಿದ್ದಾರೆ, ಇದಕ್ಕೆ ನೀವೇನ್ನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ4 ಃ ಫ್ರಾಸಾ.1 ರವರು ಮುಂದುವರೆದು ಫಿರ್ಯಾದುದಾರರು ದಿನಾಂಕಃ20/12/2021 ರಂದು ರಂದು ವಕೀಲರ ಮೂಲಕ ನೋಂದಾಯಿತ ಅಂಚೆ ಮೂಲಕ ಕಾನೂನು ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು ಸದರಿ ನೋಟಿಸ್ ತಲುಪಿದ 15 ದಿನಗಳೊಳಗಾಗಿ ರೂ.6,00,000/- ಗಳನ್ನು ಮರುಪಾವತಿ ಮಾಡಬೇಕೆಂದು ನಮೂದಿಸಿ ಕಳುಹಿಸಿದ್ದು, ಆದರೆ ಸದರಿ ನೋಟೀಸನ್ನು ನೀವು ಆರೋಪಿ ಖುದ್ದಾಗಿ ತೆಗೆದುಕೊಂಡಿದ್ದರೂ ನೀವು ಆರೋಪಿ ನೋಟಿಸ್‌ಗೆ ಉತ್ತರವನ್ನಾಗಲಿ ಅಥವಾ ಹಣವನ್ನಾಗಲಿ ಮರುಪಾವತಿ ಮಾಡಿರುವುದಿಲ್ಲ ಎಂದು ಹೇಳಿದ್ದಾರೆ, ಇದಕ್ಕೆ ನೀವೇನ್ನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ5 ಃ ಫ್ರಾಸಾ.1 ರವರು ಮುಂದುವರೆದು ನೀವು ಆರೋಪಿ ಮೋಸ ಮಾಡಬೇಕೆನ್ನುವ ಉದ್ದೇಶದಿಂದಲೇ ಈ ರೀತಿಯ ಚೆಕ್ಕನ್ನು ಅವರಿಗೆ ಕೊಟ್ಟಿರುತ್ತೀರಿ ಆದುದರಿಂದ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ಹೇಳಿದ್ದಾರೆ, ಇದಕ್ಕೆ ನೀವೇನ್ನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ6 ಃ ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ?

ಉತ್ತರ ಃ ಇದೆ ಸಾಕ್ಷಿ ವಿಚಾರಣೆ ಮಾಡುತ್ತೇನೆ

ಪ್ರಶ್ನೆ7 ಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರ ಃ ಇದೆ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ ಃ 07-06-2023

7-6-23

(ದಾಸರಿ ಕ್ರಾಂತಿ ಕಿರಣ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶೃಂಗೇರಿ.

ಸುಜಾತ
ಆರೋಪಿಯ ಸಹಿಃ